# ಸ್ವಚ್ಛ ಸಂಕೀರ್ಣ™

ತ್ಯಾಜ್ಯ ನಿರ್ವಹಣಾ ಘಟಕ

# ಕಸದಿಂದ ಸಂಪತ್ತಿನೆಡೆಗೆ...

ಕರ್ನಾಟಕ ಸರ್ಕಾರ

ಸ್ವಚ್ಛಮೇವ ಜಯತೇ SWACHHA MEVA JAYATE

ಸ್ವಚ್ಛ ಭಾರತ

ಒಂದು ಹೆಜ್ಜೆ, ಸ್ವಚ್ಛತೆಯೆಡೆಗೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ






ಕರ್ನಾಟಕದಾದ್ಯಂತ ಹಬ್ಬಗಳು, ಉತ್ಸವ ಮತ್ತು ಸಂಭ್ರಮಗಳ ಸುತ್ತ ಹೊಸ ಆಚರಣೆಗಳು ಮತ್ತು ಹೊಸ ಸಂಸ್ಕೃತಿ ಅಭ್ಯಾಸಗಳನ್ನು ರೂಢಿಸಿಕೊಳ್ಳುವ ಮೂಲಕ ತ್ಯಾಜ್ಯ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ಸಮುದಾಯಗಳಿಗೆ ಇದು ಪ್ರೇರಣೆ.


ಪ್ಲಾಸ್ಟಿಕ್
ವಿಂಗಡಣೆ
ಬಿಳಿ ಕವರ್‌ಗಳು
ಹಾಲಿನ ಕವರ್‌ಗಳು

## ಜಾಗೃತಿ ಮತ್ತು ಮೂಲಸೌಕರ್ಯ ನಿರ್ಮಾಣ

ಅಕ್ಟೋಬರ್ 2, 2014 ರಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಅನುಷ್ಠಾನ ಮಾಡಲಾಗಿರುವ ಮಹತ್ವಾಕಾಂಕ್ಷಿ ಯೋಜನೆ ಸ್ವಚ್ಛ ಭಾರತ ಅಭಿಯಾನ, ಈ ಯೋಜನೆ ಆರಂಭವಾದಾಗಿನಿಂದಲೂ ಮೂಲಭೂತ ಸೌಕರ್ಯಗಳ ನಿರ್ಮಾಣ ಮಾಡುವುದರೊಂದಿಗೆ ಹಾಗೂ ನೈರ್ಮಲ್ಯ, ತ್ಯಾಜ್ಯ ನಿರ್ವಹಣೆ, ನೀರು ಸರಬರಾಜು ಮತ್ತು ನೀರಿನ ಬಳಕೆಯ ಬಗ್ಗೆ ಗ್ರಾಮೀಣ ಸಮುದಾಯಕ್ಕೆ ಜಾಗೃತಿ ಮೂಡಿಸಲು ಹಲವಾರು ಉಪಕ್ರಮಗಳನ್ನು ಕೈಗೊಂಡಿದ್ದು, ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯವು ಮುಂಚೂಣಿಯಲ್ಲಿದೆ.

## ಯೋಜನೆಯ ಸಾಕಾರಕ್ಕೆ ಜಾಗೃತಿಯಷ್ಟೇ ಸಾಕೇ?

ಮೂಲಸೌಕರ್ಯಗಳನ್ನು ನಿರ್ಮಿಸಿ ಜಾಗೃತಿ ಮೂಡಿಸಿದರಷ್ಟೇ ಯೋಜನೆಯು ಸಾಕಾರವಾಗುವುದಿಲ್ಲ. ತ್ಯಾಜ್ಯ, ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಕೆಲವು ಆಚರಣೆಗಳು, ಮೂಢ ನಂಬಿಕೆಗಳು ಅನಾದಿ ಕಾಲದಿಂದಲೂ ಜನರ ಮನಸ್ಸಿನಲ್ಲಿ ಗಟ್ಟಿಯಾಗಿ ಮನೆಮಾಡಿವೆ. ಇದರ ಪರಿಣಾಮ, ಇಂತಹ ಸಮಸ್ಯೆಗಳ ಬಗ್ಗೆ ಹೆಚ್ಚು ಗಮನ ಹರಿಸಿರುವುದಿಲ್ಲ ಹಾಗೂ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ನಡವಳಿಕೆಗಳನ್ನು ಬದಲಾಯಿಸಿಕೊಂಡಿರುವುದಿಲ್ಲ.

ಪ್ರಸ್ತುತ, ಗ್ರಾಮೀಣ ಜನರ ಆಚರಣೆಗಳೊಂದಿಗೆ, ಹೊಸ ಸಂಸ್ಕೃತಿ ಮತ್ತು ಹೊಸ ಆಚರಣೆಗಳನ್ನು ರೂಪಿಸಿ, ಅವರ ನಡವಳಿಕೆಗಳನ್ನು ಬದಲಾಯಿಸುವ ಅಗತ್ಯತೆ ಇದೆ.

## ಗ್ರಾಮಗಳಲ್ಲಿ ಹೆಚ್ಚುತ್ತಿರುವ ತ್ಯಾಜ್ಯ

ಕರ್ನಾಟಕವು, ದಕ್ಷಿಣ ಭಾರತದಲ್ಲಿ ಪ್ರಮುಖ ರಾಜ್ಯವಾಗಿದ್ದು, 65 ದಶಲಕ್ಷ ಜನಸಂಖ್ಯೆಯನ್ನು ಹೊಂದಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ, 61% (37 ದಶಲಕ್ಷ) ಜನರು ಮತ್ತು ಸುಮಾರು 90 ಲಕ್ಷ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಕಳೆದ ಕೆಲವು ವರ್ಷಗಳಿಂದ ನಮ್ಮ ಗ್ರಾಮಗಳು, ನಗರೀಕರಣದತ್ತ ಮುಖ ಮಾಡುತ್ತಿವೆ ಮತ್ತು ನಗರ ಜೀವನಶೈಲಿಯನ್ನು ಅನುಸರಿಸುತ್ತಿವೆ. ಗ್ರಾಮಗಳಲ್ಲಿಯೂ ಕೊಳ್ಳುವ ಮತ್ತು ಬಳಕೆಯ ಸಾಮರ್ಥ್ಯ ಹೆಚ್ಚುತ್ತಿದೆ ಇದರಿಂದಾಗಿ ತ್ಯಾಜ್ಯ ಉತ್ಪಾದನೆ ಹೆಚ್ಚಾಗುತ್ತಿದೆ ಹಾಗೂ ಗ್ರಾಮೀಣ ಜನರಲ್ಲಿ ತಾವು ಎಸೆಯುವ ತ್ಯಾಜ್ಯವನ್ನು ಭೂ ತಾಯಿ ಅರಗಿಸುಕೊಳ್ಳುತ್ತಾಳೆ ಎಂಬ ತಪ್ಪು ಕಲ್ಪನೆ ಮನೆ ಮಾಡಿದೆ.

## ಕರ್ನಾಟಕದಲ್ಲಿ ತ್ಯಾಜ್ಯ

ಕೋವಿಡ್ ನಂತರ, ಜನರಲ್ಲಿ ಸ್ವಚ್ಛತೆಯ ಬಗ್ಗೆ ಪ್ರಜ್ಞಾವಂತಿಕೆ ಹೆಚ್ಚುತ್ತಿದೆ. ಆದ್ದರಿಂದ ಸಕಾರಾತ್ಮಕ ಚಿಂತನೆಯೆಡೆಗೆ ತಮ್ಮ ದೃಷ್ಟಿ ನೆಡುತ್ತಿದ್ದಾರೆ. ಸ್ವಚ್ಛತೆ ಮತ್ತು ವೈಯಕ್ತಿಕ ನೈರ್ಮಲ್ಯದ ಅಗತ್ಯತೆ ಬಗ್ಗೆ ಮಾತನಾಡುತ್ತಿದ್ದಾರೆ. ಪ್ರತಿಕೂಲ ಪರಿಸ್ಥಿತಿಯಲ್ಲಿ ಜನರಲ್ಲಿ ಮೂಡುವ ಪ್ರಜ್ಞೆ, ನೈಸರ್ಗಿಕ ಸಾಮರ್ಥ್ಯ ಎಂದು ಹೇಳಬಹುದು. ಆದರೆ ಇದು ಸುಸ್ಥಿರ ತ್ಯಾಜ್ಯ ನಿರ್ವಹಣೆಯ ಸಂಸ್ಕೃತಿಯಾಗಬಹುದೇ? ಉತ್ಪಾದನೆ ಮತ್ತು ಜವಾಬ್ದಾರಿಯುತ ಬಳಕೆಯ ಪ್ರವೃತ್ತಿಗಳನ್ನು ಜನರಲ್ಲಿ ಪ್ರೇರೇಪಿಸುವುದು ಹೇಗೆ ಎಂಬುದನ್ನು ಚಿಂತಿಸುವ ಅಗತ್ಯತೆ ಇದೆ.

## ಹಬ್ಬಗಳ ಜೊತೆಗೆ ಸ್ವಚ್ಛತೆಯ ತಳಕು

ತ್ಯಾಜ್ಯವನ್ನು ಸಮಸ್ಯೆಯಾಗಿ ಪರಿಗಣಿಸದೆ, ಒಂದು ಅವಕಾಶವಾಗಿ ಬಳಸಿ, ಸ್ವಚ್ಛ ಸುಂದರ ಕರ್ನಾಟಕವನ್ನು ರೂಪಿಸಲು ಜನರ ಭಾಗವಹಿಸುವಿಕೆ ಹಾಗೂ ಸಮುದಾಯದ ಒಗ್ಗೂಡಿಸುವಿಕೆ ಹೇಗೆ ಸಾಧ್ಯ?

**ಭಾರತದಲ್ಲಿ ಮಾತ್ರವಲ್ಲದೆ ರಾಜ್ಯದಲ್ಲಿಯೂ ಜನರು ಹಬ್ಬ ಹರಿದಿನಗಳನ್ನು ಒಟ್ಟಾಗಿ ಸೇರಿ, ಸಮುದಾಯಗಳೊಂದಿಗೆ ಸಂಭ್ರಮದಿಂದ ಆಚರಿಸುತ್ತಾರೆ.**

ಹಬ್ಬಗಳು ಧರ್ಮ, ಜಾತಿ, ಲಿಂಗ, ವಯಸ್ಸು ಅಥವಾ ಆದಾಯವನ್ನೂ ಮೀರಿ ಆಚರಣೆಗಳಲ್ಲಿ ಭಾಗವಹಿಸುವ ಸಮಯವಾಗಿದೆ. ನಾವು, ಜನರು, ಯಾವಾಗಲೂ ಎಲ್ಲವನ್ನೂ ಒಟ್ಟಿಗೆ, ಸಮುದಾಯಗಳೊಂದಿಗೆ ಸಂಭ್ರಮಿಸುವುದನ್ನು ಕಾಣುತ್ತೇವೆ!

ಹಬ್ಬಗಳಲ್ಲಿ ದೈವವನ್ನು ಮನೆಗೆ ಆಹ್ವಾನಿಸುವುದು ಸಾಮಾನ್ಯ, ಈ ಸಂದರ್ಭದಲ್ಲಿ ಮನೆ ಮನ ಶುದ್ಧವಾಗಿರಬೇಕು. ಬಹುಶಃ ಪ್ರತಿ ಹಬ್ಬಕ್ಕೂ ಮುನ್ನ ದೇಹ, ಆತ್ಮ ಮತ್ತು ಮನೆಯನ್ನು ಶುದ್ಧೀಕರಿಸುವ ಸಂಸ್ಕೃತಿ ಎಲ್ಲರಲ್ಲಿಯೂ ಇದೆ.

ನಮ್ಮ ಸಂಸ್ಕೃತಿಯಲ್ಲಿ, ಹಬ್ಬಗಳ ಆಚರಣೆಯ ಸಂದರ್ಭದಲ್ಲಿ ಶುದ್ಧೀಕರಣ ಕೇವಲ ನಮ್ಮ ಮನಸ್ಸಿನಲ್ಲಿ ಉಳಿದುಬಿಡುತ್ತದೆ  ಆದರೆ ನಮ್ಮ ಪರಿಸರದ ಸ್ವಚ್ಛತೆಯ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ ಅಥವಾ ಕಾರ್ಯರೂಪಕ್ಕೆ ಬರುವುದಿಲ್ಲ.

ಈ ಹಬ್ಬದ ಋತುವಿನಲ್ಲಿ, ಅದರಲ್ಲಿಯೂ ವಿಶೇಷವಾಗಿ ಈ ಸಾಂಕ್ರಾಮಿಕ ಕಾಲದಲ್ಲಿ ಆಚರಿಸಲಾಗುವ ಪ್ರತಿಯೊಂದು ಹಬ್ಬದ ಜೊತೆ ಜೊತೆಗೆ ಆರೋಗ್ಯ ಮತ್ತು ನೈರ್ಮಲ್ಯದ ಪರಿಕಲ್ಪನೆಯನ್ನು ಸಾಮಾನ್ಯ ವಿಷಯವಾಗಿ ಮಾಡುವ ಮೂಲಕ ಸ್ವಚ್ಛತೆಯ ಆಚರಣೆಯನ್ನು ಮಾಡುವುದು ಹೇಗೆ?

**ತ್ಯಾಜ್ಯದ ಬಗೆಗಿನ ಜನರ ನಿಲುವು, ನಡವಳಿಕೆಗಳನ್ನು ಬದಲಾಯಿಸಲು ಹಾಗೂ ಜನರಲ್ಲಿ ಉತ್ತಮ ಅಭ್ಯಾಸಗಳನ್ನು ಬೆಳೆಸಿಕೊಳ್ಳುವಂತೆ ಮಾಡಲು ಕೇವಲ ಸೂಚನೆಗಳನ್ನು ನೀಡುವ ಮೂಲಕ ಸಾಧ್ಯವಿಲ್ಲ. ಆದರೆ ಸಕಾರಾತ್ಮಕವಾದ ಹೊಸ ಸಂಸ್ಕೃತಿ ಮತ್ತು ಆಚರಣೆಗಳನ್ನು ರೂಪಿಸುವ ಮೂಲಕ ಸಾಕಾರಗೊಳಿಸಬಹುದು.**

## ಹೊಸ ಸಂಸ್ಕೃತಿಯ ಅನಾವರಣ

ಕರ್ನಾಟಕ ರಾಜ್ಯ ಸರ್ಕಾರದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜನರ ನಡವಳಿಕೆಗಳ ಬದಲಾವಣೆಗಾಗಿ ಹಾಗೂ ಗ್ರಾಮೀಣ ಕರ್ನಾಟಕದ ಜನರಿಗೆ ಸ್ವಚ್ಛತೆಯ ಹೊಸ ಸಂಸ್ಕೃತಿಯನ್ನು ಅನಾವರಣಗೊಳಿಸಲು ಮತ್ತು ಪಸರಿಸಲು ಹಲವು ಕಾರ್ಯಕ್ರಮಗಳನ್ನು ಕಾಲ ಕಾಲಕ್ಕೆ ಯೋಜಿಸುತ್ತಿದೆ.

ಹೊಸ ಸ್ವಚ್ಛತಾ ಸಂಸ್ಕೃತಿಯನ್ನು ಸಮುದಾಯಗಳು ಮತ್ತು ಜನರು ಅಳವಡಿಸಿಕೊಳ್ಳುವುದೇ ಈಗ ಇರುವ ಸವಾಲು. ಇದಕ್ಕಾಗಿ ಈ ಹಬ್ಬದ ಋತುವಿನಲ್ಲಿ, ಆರೋಗ್ಯ ಮತ್ತು ನೈರ್ಮಲ್ಯ ಬಗ್ಗೆ ಅರಿವು ಹಾಗೂ ಸ್ವಚ್ಛತೆಯ ಆಚರಣೆಯು ಪ್ರತಿ ಹಬ್ಬದ ಮೂಲ ವಿಷಯವಾಗಿ ಸಂವಹಿಸಲಾಗುತ್ತಿದೆ.



ಸಕಾರಾತ್ಮಕ ಏಕೀಕರಣದ ಮೂಲಕ ಸ್ವಚ್ಛತೆಯ ಹೊಸ ಸಂಸ್ಕೃತಿಯನ್ನು ಹರಡುವುದು

### ಹೊಸ ಪರಿಕಲ್ಪನೆ

## ಸ್ವಚ್ಛೋತ್ಸವ ಆರಂಭ!


ಈ ಹಬ್ಬದ ಋತುವಿನಲ್ಲಿ 'ಸ್ವಚ್ಛೋತ್ಸವ' ಪರಿಕಲ್ಪನೆ ವಿನ್ಯಾಸಗೊಳಿಸಲಾಗಿದ್ದು, ಗ್ರಾಮೀಣ ಕರ್ನಾಟಕದಲ್ಲಿ ಪ್ರತಿ ದಿನ ಸಂಭ್ರಮ ಮತ್ತು ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ.

'ಸ್ವಚ್ಛೋತ್ಸವ': ಸ್ವಚ್ಛತೆಯು ಸಂತೋಷ, ಹಬ್ಬ ಮತ್ತು ಸಂಭ್ರಮಗಳ ಪ್ರತೀಕವಾಗಿದೆ, ಉತ್ಸವವು ಸಾಮಾನ್ಯವಾಗಿ ಹಬ್ಬ ಅಥವಾ ಯಾವುದೇ ಸಂಭ್ರಮವನ್ನು ಸೂಚಿಸುತ್ತದೆ ಹಾಗೂ ಸಂತೋಷ ಮತ್ತು ಆನಂದದ ಅರ್ಥವನ್ನು ಸಹ ಹೊಂದಿದೆ.

ಸ್ವಚ್ಛೋತ್ಸವವು ಸಮುದಾಯಗಳನ್ನು ಒಗ್ಗೂಡಿಸಿ, ತಮ್ಮ ಗ್ರಾಮಗಳನ್ನು ಸ್ವಚ್ಛವಾಗಿಡಲು, ವೈಜ್ಞಾನಿಕವಾಗಿ ತ್ಯಾಜ್ಯ ನಿರ್ವಹಣೆ ಮಾಡಲು ಪ್ರೇರೇಪಿಸುತ್ತದೆ, ಇದರಿಂದ ಸ್ವಚ್ಛೋತ್ಸವವು ನಿತ್ಯೋತ್ಸವವಾಗುತ್ತದೆ (ನಿತ್ಯ ಉತ್ಸವವಾಗುತ್ತದೆ)!

# ಮನಃಪರಿವರ್ತನೆಯ ನೀಲನಕ್ಷೆ

ಕರ್ನಾಟಕದ ಸಾಂಸ್ಕೃತಿಕ ಸಂಬಂಧದೊಂದಿಗೆ ಸಮನ್ವಯ ಸಾಧಿಸಿ, ಸಮುದಾಯಗಳ ಪಾಲ್ಗೊಳ್ಳುವಿಕೆಯನ್ನು ಪ್ರೇರೇಪಿಸಲು, ಹೊಸ ಸಂಸ್ಕೃತಿ, ಹೊಸ ನೀತಿಗಳನ್ನು ಜಾರಿಗೆ ತರುವುದು ಹಾಗೂ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಸೌಲಭ್ಯಗಳ ಬಳಕೆಯನ್ನು ಹೆಚ್ಚಿಸಲು ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ನೀಲನಕ್ಷೆಯನ್ನು ರೂಪಿಸಲಾಗಿದೆ.




ನಡವಳಿಕೆ ಬದಲಾವಣೆಗಾಗಿ ನೀಲನಕ್ಷೆ ವಿನ್ಯಾಸ

### ವಿನ್ಯಾಸ: ಸಾಮಾಜಿಕ ವ್ಯಾಖ್ಯಾನ ಮೂಲಕ ಪ್ರೇರೇಪಣೆ

ಮೊದಲ ಹೆಜ್ಜೆಯಾಗಿ, ತ್ಯಾಜ್ಯ ನಿರ್ವಹಣೆ, ಶೌಚಾಲಯ/ನೈರ್ಮಲ್ಯ ಮತ್ತು ನೀರಿನ ಬಗ್ಗೆ ಹಾಸ್ಯಭರಿತ ಸಂಭಾಷಣೆಗಳ ಮೂಲಕ ಹೊಸ ಸಾಮಾಜಿಕ ವ್ಯಾಖ್ಯಾನಗಳ ವಿನ್ಯಾಸ ಮಾಡಲಾಗಿದೆ.

### ನಿರ್ಮಾಣ: ಸ್ವಚ್ಛತಾ ಕ್ಯಾಲೆಂಡರ್

ಜನರು ಸ್ವಚ್ಛತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಹಾಗೂ ಪ್ರತಿದಿನ ಸ್ವಚ್ಛತೆಯ ಆಚರಣೆಯನ್ನು ಕೈಗೊಳ್ಳಲು ಸಹಾಯವಾಗುವಂತೆ ಸ್ವಚ್ಛತಾ ಕ್ಯಾಲೆಂಡರ್ ರಚನೆ ಮಾಡಲಾಗಿದೆ.

### ಹರಡುವಿಕೆ: ಸ್ವಚ್ಛತಾ ವಿಚಾರಗಳು

ಜನರು ಹೆಚ್ಚು ಸೇರುವ ಸಾಮಾನ್ಯ ಪ್ರದೇಶಗಳಾದ ಹಾಲಿನ ಡೈರಿ, ಅರಳಿಕಟ್ಟೆ, ಧಾರ್ಮಿಕ ಸ್ಥಳಗಳು, ಮಾರುಕಟ್ಟೆ ಪ್ರದೇಶಗಳು, ಸರ್ಕಾರಿ ಕಚೇರಿಗಳು ಇತ್ಯಾದಿ ಸ್ಥಳಗಳಲ್ಲಿ, ನೀರು, ನೈರ್ಮಲ್ಯ ಹಾಗೂ ಸ್ವಚ್ಛತೆಯ ಬಗ್ಗೆ ಸಂಭಾಷಣಾ ಮಾದರಿಯ ಚಿತ್ರಪತ್ರಗಳನ್ನು  ಅಳವಡಿಕೆ ಮಾಡಲಾಗುವುದು.

## ನಡವಳಿಕೆ ಬದಲಾವಣೆಗಾಗಿ ರಚನಾತ್ಮಕ ಕಾರ್ಯತಂತ್ರಗಳು

### ಸ್ವಚ್ಛ ಉತ್ಸವಗಳು

ಗ್ರಾಮೀಣ ಕರ್ನಾಟಕದಲ್ಲಿ ಸ್ವಚ್ಛತೆಯ ಹೊಸ ಸಂಸ್ಕೃತಿಯನ್ನು ಹುಟ್ಟುಹಾಕಲು ಹಾಗೂ ವರ್ಷಪೂರ್ತಿ ಹಬ್ಬ ಆಚರಣೆಗಳ ಜೊತೆ ಜೊತೆಗೆ ಸ್ವಚ್ಛ ಉತ್ಸವಗಳು ಮತ್ತು ಹಲವಾರು ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗುವುದು.

### ಉಪ-ನಿಯಮಗಳು: ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ, ಗ್ರಾಮೀಣ ನೈರ್ಮಲ್ಯ ನೀತಿ ಮತ್ತು ಕಾರ್ಯತಂತ್ರ

ಕರ್ನಾಟಕ ರಾಜ್ಯ ಸರ್ಕಾರದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಗ್ರಾಮೀಣ ಕರ್ನಾಟಕಕ್ಕಾಗಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ (SLWM) ಘಟಕಗಳ ನಿರ್ಮಾಣ, ವೈಜ್ಞಾನಿಕ ನಿರ್ವಹಣೆ ಮತ್ತು ಅನುಷ್ಠಾನಕ್ಕೆ ಮಾರ್ಗದರ್ಶಿ ಸೂತ್ರಗಳ ರೂಪದಲ್ಲಿ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ನೀತಿಯನ್ನು ಜಾರಿಗೆ ತಂದಿದೆ. ಇದು ಗ್ರಾಮೀಣ ಪ್ರದೇಶದ ನೈರ್ಮಲ್ಯ ನೀತಿ ಮತ್ತು ಕಾರ್ಯತಂತ್ರದ ಬಗ್ಗೆ ವಿಸ್ತೃತ ಮಾಹಿತಿ ಹೊಂದಿದೆ. ಇಂತಹ ಸಮಗ್ರ ನೀತಿ ಅಳವಡಿಸಿಕೊಂಡ ದೇಶದ ಮೊದಲ ರಾಜ್ಯ ಕರ್ನಾಟಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

### ಪರಿಹಾರ: ಸಾರ್ವಜನಿಕ ಕುಂದುಕೊರತೆ ಮತ್ತು ಪರಿಹಾರ ವೇದಿಕೆ

ತ್ಯಾಜ್ಯ ನಿರ್ವಹಣೆ, ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಎಲ್ಲಾ ದೂರುಗಳನ್ನು ಪರಿಹರಿಸಲು ವಿವಿಧ ಮಾರ್ಗಗಳಾದ, ಮೊಬೈಲ್ ಸಂಖ್ಯೆ **94809 85555 ಕ್ಕೆ ಕರೆ/ವಾಟ್ಸಾಪ್/ಎಸ್.ಎಂ.ಎಸ್ ಹಾಗೂ ಸಾಮಾಜಿಕ ಜಾಲತಾಣಗಳ** ಮೂಲಕ ದೂರುಗಳನ್ನು ನೋಂದಾಯಿಸಲು ಒಂದು ಸಮಗ್ರ ವೇದಿಕೆಯನ್ನು ಇಲಾಖೆಯು ಆರಂಭಿಸಿ ಕಾರ್ಯಾಚರಣೆ ನಡೆಸುತ್ತಿದೆ.



ಭಾರತದ ಮೊದಲ ಏಕೀಕೃತ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಮತ್ತು ವ್ಯವಸ್ಥೆಯ ವಿನ್ಯಾಸ

# ಸ್ವಚ್ಛ ಸಂಕೀರ್ಣ

**ಭಾರತದಲ್ಲಿ ಮೊದಲ ಬಾರಿಗೆ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ವ್ಯವಸ್ಥೆ ಹಾಗೂ ಘಟಕಗಳಿಗೆ ಏಕೀಕೃತ ಬ್ರ್ಯಾಂಡ್ ವಿನ್ಯಾಸ ಮಾಡಲಾಗಿದೆ.**

ಸ್ವಚ್ಛತಾ ಕ್ಯಾಲೆಂಡರ್‌ನ ಭಾಗವಾಗಿ, ಮೊದಲ ಸಂಭ್ರಮಾಚರಣೆಯಾಗಿ "ಸ್ವಚ್ಛ ಸಂಕೀರ್ಣ" ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ರಾಷ್ಟ್ರದಲ್ಲಿ ಮೊದಲ ಬಾರಿಗೆ ಏಕೀಕೃತ ವಿನ್ಯಾಸ ವ್ಯವಸ್ಥೆಯನ್ನು ರೂಪಿಸಲಾಗಿದ್ದು ಕರ್ನಾಟಕದ 30 ಜಿಲ್ಲೆಗಳ ಪ್ರತಿ ಗ್ರಾಮಗಳಲ್ಲೂ ಅನುಷ್ಠಾನಗೊಳಿಸಲಾಗುವುದು.

ಸ್ವಚ್ಛ ಭಾರತ ಅಭಿಯಾನ ಆರಂಭವಾದ 6 ವರ್ಷಗಳ ನಂತರ ಮಹಾತ್ಮ ಗಾಂಧೀಜಿ ಅವರಿಗೆ ಗೌರವ ಸೂಚಕವಾಗಿ ಅವರ ಜನ್ಮ ಜಯಂತಿಯಂದು, ಕರ್ನಾಟಕ ಸರ್ಕಾರ "ಸ್ವಚ್ಛ ಸಂಕೀರ್ಣ" ಘಟಕಗಳನ್ನು ಗ್ರಾಮಗಳ ಹಂತದಲ್ಲಿ ಲೋಕಾರ್ಪಣೆ ಮಾಡಲಾಗಿದೆ.

## ಸ್ವಚ್ಛ ಸಂಕೀರ್ಣ : ಲಾಂಛನದ ವಿನ್ಯಾಸ

ಸ್ವಚ್ಛ ಸಂಕೀರ್ಣ ಲಾಂಛನದ ವಿನ್ಯಾಸವು ಹಾಗೂ ವರ್ತುಲ ಆರ್ಥಿಕತೆಯ ಮಾದರಿಯಿಂದ ಸ್ಫೂರ್ತಿ ಪಡೆದಿದೆ. ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿ (Sustainable Development Goal) ಎಸ್‌ಡಿಜಿ # 6: ಶುದ್ಧ ನೀರು ಮತ್ತು ನೈರ್ಮಲ್ಯ; ಮತ್ತು ಎಸ್‌ಡಿಜಿ #12: ಜವಾಬ್ದಾರಿಯುತ ಬಳಕೆ ಮತ್ತು ಉತ್ಪಾದನೆ ಗುರಿಯನ್ನು ಸಾಧಿಸುವ ಪ್ರಯತ್ನವಾಗಿ ಗ್ರಾಮೀಣ ಕರ್ನಾಟಕದ ಜನರಲ್ಲಿ ತ್ಯಾಜ್ಯ ನಿರ್ವಹಣೆಯ ಬಗ್ಗೆ ಜಾಗೃತಿ ಮೂಡಿಸಿ, ಸುಸ್ಥಿರ ಬಳಕೆ ಮತ್ತು ಉತ್ಪಾದನ ವಲಯದಲ್ಲಿ ಪರಿವರ್ತನೆಯನ್ನು ಮಾಡಲು ಪ್ರಜ್ಞಾಪೂರ್ವಕ ಮತ್ತು ಸಂಘಟಿತ ಪ್ರಯತ್ನಗಳನ್ನು ಮಾಡುತ್ತದೆ.

ಸ್ವಚ್ಛತೆಯ ಹೊಸ ಸಂಸ್ಕೃತಿಯನ್ನು ಪಸರಿಸುವ ಮತ್ತು ಕರ್ನಾಟಕವನ್ನು ಸ್ವಚ್ಛ, ಸುಂದರ, ಸುಸ್ಥಿರ ಮತ್ತು ಹಸಿರು ರಾಜ್ಯವನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ, ಸ್ಥಳೀಯ ಸಾಂಪ್ರದಾಯಿಕ ರಂಗೋಲಿಗಳಿಂದ ಪ್ರೇರಿತವಾದ ಹೊಸ ದೃಶ್ಯಭಾಷೆಯನ್ನು ವಿನ್ಯಾಸಗೊಳಿಸಲಾಗಿದೆ.






ಬದಲಾವಣೆ ಜನರಿಂದ ಆರಂಭ

## ಸ್ವಚ್ಛ ಸಂಕೀರ್ಣ : ಅನುಭವ ವಿನ್ಯಾಸ

"ಸ್ವಚ್ಛ ಸಂಕೀರ್ಣ" ದಲ್ಲಿ ಘನ, ದ್ರವ ಮತ್ತು ವೈದ್ಯಕೀಯ ತ್ಯಾಜ್ಯಗಳನ್ನು ಸಂಗ್ರಹಿಸಲು ಮತ್ತು ಸಂಸ್ಕರಿಸಲು ಮೀಸಲಾದ ಪ್ರದೇಶಗಳೊಂದಿಗೆ, ಸ್ವಯಂ-ಸುಸ್ಥಿರ ವ್ಯವಸ್ಥೆಯನ್ನೊಳಗೊಂಡ ಪರಿಸರ ಸ್ನೇಹಿ ಉದ್ಯಾನದ ಅನುಭವ ನೀಡಲು ಯೋಜನೆ ರೂಪಿಸಲಾಗಿದೆ.

ತ್ಯಾಜ್ಯದಿಂದ ರಚಿಸಲಾದ ಕಲಾಕೃತಿಗಳ ಪ್ರದರ್ಶನ, ತ್ಯಾಜ್ಯದ ಮರುಬಳಕೆ ವಿಧಾನಗಳ ಮಾದರಿ, ಮಾಹಿತಿ ಆಧಾರಿತಭಿತ್ತಿ ಪತ್ರಗಳೊಂದಿಗೆ "ಸ್ವಚ್ಛ ಸಂಕೀರ್ಣ" ಜ್ಞಾನದ ಕಣಜವಾಗಲಿದೆ. ಇದು ಬರಿ ತ್ಯಾಜ್ಯ ನಿರ್ವಹಣೆಯ ತಾಣವಲ್ಲದೆ ಮಕ್ಕಳು, ಮಹಿಳೆಯರು, ಯುವಕರು, ವಿದ್ಯಾರ್ಥಿಗಳು ಮತ್ತು ಗ್ರಾಮೀಣ ಕರ್ನಾಟಕದ ಜನರು ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಹಾಗೂ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯ ಉಪಯೋಗದ ಕುರಿತು ಅರ್ಥಮಾಡಿಕೊಳ್ಳಲು ಮಾಹಿತಿ ತಾಣಗಳಾಗಿ ಕಾರ್ಯನಿರ್ವಹಿಸಲಿವೆ.

## ಸ್ವಚ್ಛ ಸಂಕೀರ್ಣ : ವಿನ್ಯಾಸ ವ್ಯವಸ್ಥೆಯ ರಚನೆ

"ಸ್ವಚ್ಛ ಸಂಕೀರ್ಣ" ದ ಕಾರ್ಯಕ್ರಮಗಳಲ್ಲಿ ಕರ್ನಾಟಕದಾದ್ಯಂತ ಸಿಬ್ಬಂದಿ, ಅಧಿಕಾರಿಗಳು, ಸ್ವಚ್ಛಗ್ರಾಹಿಗಳು, ಸಮುದಾಯಗಳು ಮತ್ತು ಪಾಲುದಾರರು ಭಾಗವಹಿಸಲು ಪ್ರೇರೇಪಿಸಲು ವಿಸ್ತೃತ ವಿನ್ಯಾಸ ವ್ಯವಸ್ಥೆಯನ್ನು ರಚಿಸಲಾಗಿದೆ.

ಸ್ವಚ್ಛ ಗುರುತು: ಸುಸ್ಥಿರ ಭವಿಷ್ಯಕ್ಕೆ ಸ್ವಾಗತ ನೀಡುವ ಪ್ರತೀಕವಾಗಿ ಘಟಕದ ಪ್ರವೇಶದ್ವಾರದಲ್ಲಿ ಸ್ವಾಗತ ಕಮಾನು ಅಳವಡಿಸಲಾಗುತ್ತಿದೆ, ಇದು ಸ್ವಚ್ಛ ಗ್ರಾಮದ ಹೆಗ್ಗುರುತಾಗಲಿದೆ.

ಸ್ವಚ್ಛ ಸಂಕೀರ್ಣ™

ಸ್ವಚ್ಛತಾ ಲಾಂಛನ

SWACHHA SANKEERNA™

### ಗೋಡೆ ಬರಹಗಳ ಮೂಲಕ ಸ್ಫೂರ್ತಿದಾಯಕ ಸಂದೇಶಗಳು/ಸೂಚನೆಗಳು


ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಮತ್ತು ಸುರಕ್ಷತಾ ಮುನ್ನೆಚ್ಚರಿಕೆಗಳು ಹಾಗೂ ಮತ್ತಿತರ ಸೂಚನೆಗಳನ್ನು ಗೋಡೆಯ ಮೇಲೆ ಚಿತ್ರಿಸಲಾಗುತ್ತದೆ. ಈ ಗೋಡೆ ಬರಹಗಳನ್ನು ಸ್ಥಳೀಯ ಕಲಾವಿದರ ಸಹಾಯದಿಂದ ಅನುಷ್ಠಾನಗೊಳಿಸಲಾಗುತ್ತಿದೆ.




ಸ್ಥಳೀಯ ಸೃಜನಶೀಲ ಕಲಾಕಾರರಿಂದ ಸಂಯೋಜಿತ ಗೋಡೆ ಬರಹಗಳು




ತ್ಯಾಜ್ಯ ಪಯಾಣದ ಅನಾವರಣ




ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಪ್ರೇರೇಪಿಸಲು, ಸ್ವಚ್ಛ, ಆರೋಗ್ಯಕರ ಕರ್ನಾಟಕಕ್ಕಾಗಿ ವಿಶೇಷವಾಗಿ ವಿನ್ಯಾಸ ಮಾಡಿದ ಗೋಡೆಬರಹಗಳು

## ತ್ಯಾಜ್ಯ ಸಂಸ್ಕರಣಾ ವಲಯಗಳು

ಸ್ವಚ್ಛ ಸಂಕೀರ್ಣ ಘಟಕಗಳಲ್ಲಿ, ವಿಂಗಡಣೆ, ಸಂಸ್ಕರಣೆ, ಸಂಗ್ರಹಣೆ ಇತ್ಯಾದಿ ಪ್ರಕ್ರಿಯೆಗೆ ಪ್ರತ್ಯೇಕ ವಲಯಗಳನ್ನು ನಿಗದಿಪಡಿಸಲಾಗಿದ್ದು, ಆಯಾ ವಲಯಕ್ಕೆ ಸಂಬಂಧಪಟ್ಟ ವಿವರ ಮತ್ತು ಸೂಚನೆಗಳನ್ನು ದೃಶ್ಯರೂಪದಲ್ಲಿ ಪ್ರದರ್ಶಿಸಲಾಗುತ್ತದೆ.

## ಮಾಹಿತಿ ಚಿತ್ರಪತ್ರ

ಸ್ವಚ್ಛ ಸಂಕೀರ್ಣಕ್ಕೆ ಭೇಟಿ ನೀಡುವ ಸಾರ್ವಜನಿಕರು ಮತ್ತು ಮುಂದಿನ ಪೀಳಿಗೆಯ ಯುವ ಸಮುದಾಯಕ್ಕೆ, ತ್ಯಾಜ್ಯ ಮರುಬಳಕೆ ಹಾಗೂ ನಿರ್ವಹಣೆಯ ಬಗ್ಗೆ ಮಾಹಿತಿ ನೀಡುವ ಚಿತ್ರಪತ್ರಗಳನ್ನು ವಿನ್ಯಾಸಗೊಳಿಸಲಾಗಿದೆ.

## ಮಾರ್ಗದರ್ಶಿ ಫಲಕಗಳು

ಸ್ವಚ್ಛ ಸಂಕೀರ್ಣಕ್ಕೆ ಭೇಟಿ ನೀಡುವ ಜನರ ಅನುಕೂಲಕ್ಕಾಗಿ, ಘಟಕದಲ್ಲಿ ಲಭ್ಯವಿರುವ ವಲಯಗಳು ಮತ್ತು ಸೌಲಭ್ಯಗಳೆಡೆಗೆ ಸಾಗುವ ಮಾರ್ಗ ಸೂಚಿ ಫಲಕಗಳನ್ನು ವಿಶೇಷ ರೀತಿಯಲ್ಲಿ ವಿನ್ಯಾಸಗೊಳಿಸಿ ತ್ಯಾಜ್ಯದಿಂದ ತಯಾರಿಸಿದ ವಸ್ತುಗಳನ್ನು ಉಪಯೋಗಿಸಿ ಸಿದ್ಧಗೊಳಿಸಿ ಅಳವಡಿಸಲಾಗಿದೆ.




ತ್ಯಾಜ್ಯ ಸುಂದರಗೊಳಿಸುವ ಹಾಗೂ ತ್ಯಾಜ್ಯದಿಂದ ತಯಾರಿಸಿದ ವಸ್ತುಗಳನ್ನು ಬಳಸಿ ವಿನ್ಯಾಸಗೊಳಿಸಲಾದ ಫಲಕಗಳು





ಸ್ಥಳೀಯ ಸಮುದಾಯಗಳಿಂದ ನಿರೂಪಿಸಲ್ಪಟ್ಟ ಘನ ತ್ಯಾಜ್ಯ ಕಲಾಕೃತಿಗಳು

## ಕಸದಿಂದ ಕಲಾಕೃತಿ

ತ್ಯಾಜ್ಯವನ್ನು ರಚನಾತ್ಮಕವಾಗಿ ಹೇಗೆ ಬಳಸಬಹುದೆಂದು ತೋರಿಸಲು ಸ್ಥಳೀಯ ಕಲಾವಿದರ ಸಹಾಯದಿಂದ ಘನ ತ್ಯಾಜ್ಯದಿಂದ ಕಲಾಕೃತಿಗಳನ್ನು ನಿರ್ಮಾಣ ಮಾಡಲಾಗುವುದು. ಇದು ಸ್ಥಳೀಯ ಕಲಾವಿದರ ಜೀವನೋಪಾಯಗಳನ್ನು ಸುಧಾರಿಸಲು ಮತ್ತು ಸಾಮಾಜಿಕ-ಆರ್ಥಿಕ ಅವಕಾಶಗಳನ್ನು ಹೆಚ್ಚಿಸಲು ಅನುಕೂಲವಾಗುತ್ತದೆ. ಇಲ್ಲಿಗೆ ಬರುವ ಸಂದರ್ಶಕರು ಈ ಕಲಾಕೃತಿಗಳ ಮುಂದೆ ಫೋಟೊಗಳನ್ನು ತೆಗೆದು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಬಹುದು, ಸ್ವಚ್ಛ ಸಂಕೀರ್ಣವನ್ನು ಟ್ಯಾಗ್ ಮಾಡಬಹುದು. ಇದರಿಂದ ಜನರಲ್ಲಿ ಅರಿವು ಮೂಡಿಸಿ, ಸ್ವಚ್ಛ ಸಂಕೀರ್ಣದ ಬಗ್ಗೆ ಹೆಚ್ಚಿನ ಮಾಹಿತಿ ಮಾಡೆಯಲು ಅನುಕೂಲವಾಗುತ್ತದೆ.

## ರಕ್ಷಣಾತ್ಮಕ ಸಮವಸ್ತ್ರ ಮತ್ತು ಮಾಸ್ಕ್‌ಗಳು

ಸ್ವಚ್ಛ ಕಾರ್ಮಿಕರ (ಸ್ವಚ್ಛತಾ ಕಾರ್ಯಕರ್ತರು) ಸುರಕ್ಷತೆಗಾಗಿ ವೈಸರ್‌ಗಳು, ಗ್ಲೌಸ್‌ಗಳು ಮತ್ತು ಮಾಸ್ಕ್‌ಗಳನ್ನು ಹೊಂದಿರುವ ನೂತನ ಸಮವಸ್ತ್ರವನ್ನು ವಿನ್ಯಾಸಗೊಳಿಸಲಾಗಿದೆ.




ಸ್ವಚ್ಛತಾ ಕಾರ್ಮಿಕರು ಸ್ಮಾರ್ಟ್, ಸುರಕ್ಷಿತ ರಕ್ಷಣಾ ಸಮವಸ್ತ್ರದಲ್ಲಿ

### ಸ್ವಚ್ಛ ವಾಹಿನಿ

ತ್ಯಾಜ್ಯ ಸಂಗ್ರಹ ವಾಹನಕ್ಕೆ "ಸ್ವಚ್ಛ ವಾಹಿನಿ" ಎಂದು ಹೆಸರಿಸಲಾಗಿದ್ದು, ಜನರಲ್ಲಿ ತ್ಯಾಜ್ಯ ವಿಂಗಡಣೆಗೆ ಪ್ರೇರಣೆ ನೀಡುವ ವಿನ್ಯಾಸವನ್ನು ಚಿತ್ರಿಸಲಾಗುತ್ತದೆ. ಈ ವಾಹನದಲ್ಲಿ ಗ್ರಾಮಕ್ಕೆ ತೆರಳುವ/ತ್ಯಾಜ್ಯ ಸಂಗ್ರಹಿಸುವ ಸಮಯದಲ್ಲಿ, ಸೂಚನೆಗಳನ್ನು ವಾಹನದಲ್ಲಿ ಅಳವಡಿಸಲಾಗಿರುವ ಧ್ವನಿವರ್ಧಕಗಳ ಮೂಲಕ ಪ್ರಚಾರಗೊಳಿಸಲಾಗುತ್ತದೆ.




ಸ್ವಚ್ಛ ವಾಹಿನಿ

### ಸ್ವಚ್ಛತಾ ಗೀತೆ

ಮಹಾತ್ಮ ಗಾಂಧೀಜಿಯವರ ಅಚ್ಚುಮೆಚ್ಚಿನ, ಜನಪ್ರಿಯ ಭಜನೆಯಿಂದ ಸ್ಫೂರ್ತಿ ಪಡೆದ  ಸ್ವಚ್ಛತಾ ಗೀತೆಯನ್ನು, ಒಂದು ದೃಶ್ಯ ಕಾವ್ಯವಾಗಿ ತಯಾರಿಸಲಾಗಿದ್ದು, ಈ ಗೀತೆ, ಸ್ವಚ್ಛತೆಯ ಬಗ್ಗೆ ಹೆಮ್ಮೆ ಮೂಡಿಸಿ ಜನರ ದೈನಂದಿನ ಸ್ವಚ್ಛತೆಯನ್ನು ಪ್ರೇರೇಪಿಸುತ್ತದೆ.

https://youtu.be/urVgJPUK_4A

## ಸ್ವಚ್ಛ ಸಂಕೀರ್ಣ : ಜನರ ಪಾಲ್ಗೊಳ್ಳುವಿಕೆಗೆ ಸಾಧನ

**ಜನರಿಗೆ ಉಪಯೋಗವಾಗುವ, ಸ್ವಚ್ಛ ಸಂಕೀರ್ಣದ ಪ್ರಯೋಜನಗಳನ್ನು ತಿಳಿಸುವ ಕಿರುಹೊತ್ತಿಗೆಯನ್ನು ವಿನ್ಯಾಸಗೊಳಿಸಲಾಗಿದೆ.**






ಪರಿಣಾಮ

# "ಸ್ವಚ್ಛ ಸಂಕೀರ್ಣ" ದ ಅನಾವರಣ

ಅಕ್ಟೋಬರ್ 2, 2020 ಗಾಂಧಿ ಜಯಂತಿಯಂದು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ "ಸ್ವಚ್ಛ ಸಂಕೀರ್ಣ" ತ್ಯಾಜ್ಯ ನಿರ್ವಹಣಾ ಘಟಕಗಳನ್ನು ರಾಜ್ಯಕ್ಕೆ ಸಮರ್ಪಿಸಲಾಯಿತು.

ರಾಜ್ಯದ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಥಮ "ಸ್ವಚ್ಛ ಸಂಕೀರ್ಣ" ಘಟಕವನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ **ಶ್ರೀ. ಕೆ.ಎಸ್. ಈಶ್ವರಪ್ಪ** ನವರು ಉದ್ಘಾಟಿಸಿದರು ಹಾಗೂ ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ (ಗ್ರಾ) ಗ್ರಾಮೀಣ ಕರ್ನಾಟಕದ 30 ಜಿಲ್ಲೆಗಳಲ್ಲಿ ಇವುಗಳನ್ನು ಅನುಷ್ಠಾನಗೊಳಿಸಲಾಗುವುದು ಎಂದು ತಿಳಿಸಿದರು.

'ಸ್ವಚ್ಛತೆ ಕಾಪಾಡಲು ಜಿಲ್ಲಾಡಳಿತ ತನ್ನ ಕಾರ್ಯ ಮಾಡುತ್ತಿದೆ. ಕರ್ನಾಟಕದ ಜನತೆ ಈ ಆಂದೋಲನದಲ್ಲಿ ಭಾಗವಹಿಸುವ ಸಮಯ ಬಂದಿದ್ದು ಪ್ರತಿ ಗ್ರಾಮ ಪಂಚಾಯಿತಿ "ಸ್ವಚ್ಛ ಸಂಕೀರ್ಣ" ವನ್ನು ನಿರ್ಮಿಸಿ, ಗ್ರಾಮಗಳನ್ನು ಸ್ವಚ್ಛವಾಗಿಡಲು ಕ್ರಮ ಕೈಗೊಳ್ಳಬೇಕು.
ಸ್ವಚ್ಛಮೇವ ಜಯತೇ!"

**ಶ್ರೀ. ಕೆ.ಎಸ್. ಈಶ್ವರಪ್ಪ**
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು
ಕರ್ನಾಟಕ ಸರ್ಕಾರ



ಮುಂದೇನು?

# 2021ರ ಮಾರ್ಚ್ ವೇಳೆಗೆ 1500+ ಸ್ವಚ್ಛ ಸಂಕೀರ್ಣ ಘಟಕಗಳು!

ಸ್ವಚ್ಛ ಸಂಕೀರ್ಣ ಮತ್ತು ಸ್ವಚ್ಛೋತ್ಸವ ಆರಂಭಿಸುವುದರೊಂದಿಗೆ, ಇಡೀ ಗ್ರಾಮೀಣ ವ್ಯವಸ್ಥೆ ಮತ್ತು ರಾಜ್ಯ ಸರ್ಕಾರದ ವಿವಿಧ ಸ್ವತಂತ್ರ ಸಂಸ್ಥೆಗಳು, ತ್ಯಾಜ್ಯದ ಬಗೆಗಿನ ಜನರ ವರ್ತನೆಯನ್ನು ಬದಲಿಸುವ ವೇಗವರ್ಧಕಗಳಾಗಿ ಕಾರ್ಯ ನಿರ್ವಹಿಸುತ್ತವೆ.



ಗ್ರಾಮೀಣ ಪರಿಸರ ವ್ಯವಸ್ಥೆಯನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲು, ತ್ಯಾಜ್ಯಗಳನ್ನು ಸುಂದರಗೊಳಿಸಲು ಪ್ರೇರೇಪಣೆ

ಮಾರ್ಚ್ 2021ರ ವೇಳೆಗೆ 1500+ "ಸ್ವಚ್ಛ ಸಂಕೀರ್ಣ" ಘಟಕಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಈಗಾಗಲೇ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ಅನುಮೋದಿಸಲಾಗಿದೆ. ಈ ವಿಶಿಷ್ಟ ವಿನ್ಯಾಸದ ದೃಶ್ಯ ಭಾಷೆಯನ್ನು ಎಲ್ಲಾ ಘಟಕಗಳಲ್ಲೂ ವಿಸ್ತರಿಸಲಾಗುತ್ತದೆ. ಮುಂದುವರೆದು 2022 ರ ಮಾರ್ಚ್ ವೇಳೆಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಘಟಕಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ.












ಸ್ವಚ್ಛ ಸಂಕೀರ್ಣ
ಸ್ವಚ್ಛ ಸಂಕೀರ್ಣ






ಸ್ವಚ್ಛ ಸಂಕೀರ್ಣ
ಸ್ವಚ್ಛ ಸಂಕೀರ್ಣ


ಸ್ವಚ್ಛ ಸಂಕೀರ್ಣ
ಸ್ವಚ್ಛ ವಾಹಿನಿ

## ಪದಕೋಶ

ಸ್ವಚ್ಛೋತ್ಸವ: ಸ್ವಚ್ಛತಾ ಆಚರಣೆ/ಸಂಭ್ರಮ

ಸ್ವಚ್ಛ ವಾಹಿನಿ: ತ್ಯಾಜ್ಯ ಸಂಗ್ರಹ ವಾಹನ

ಸ್ವಚ್ಛ ಕಾರ್ಮಿಕರು: ಸ್ವಚ್ಛತಾ ಕರ್ಮಚಾರಿಗಳು

ಸ್ವಚ್ಛ ಸಂಕೀರ್ಣ: ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣಾ ಘಟಕ

ಯು.ಎನ್. ಎಸ್.ಡಿ.ಜಿ. (UN SDG): ವಿಶ್ವಸಂಸ್ಥೆಯ (ಯುನೈಟೆಡ್ ನೇಷನ್ಸ್) ಸುಸ್ಥಿರ ಅಭಿವೃದ್ಧಿ ಗುರಿಗಳು

ಎಸ್ ಬಿಎಂ(ಜಿ): ಸ್ವಚ್ಛ ಭಾರತ ಮಿಷನ್ (ಗ್ರಾಮೀಣ)

ಆರ್ ಡಿಪಿಆರ್ : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ.


ಆರ್ ಡಿಡಬ್ಲ್ಯೂ&ಎಸ್ ಡಿ: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕರ್ನಾಟಕ ಸರ್ಕಾರ.

ಜಿ.ಓ.ಕೆ. (GoK): ಕರ್ನಾಟಕ ಸರ್ಕಾರ

ಜಿ.ಓ.ಐ. (GoI): ಭಾರತ ಸರ್ಕಾರ

ಎಸ್.ಎಲ್.ಡಬ್ಲ್ಯು.ಎಂ. (SLWM): ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ

ಎಸ್.ಡಬ್ಲ್ಯು.ಎಂ. (SWM): ಘನ ತ್ಯಾಜ್ಯ ನಿರ್ವಹಣೆ


ಆರೋಗ್ಯವಂತ
ಜಾನುವಾರು
ಆರೋಗ್ಯವಂತ
ಮಕ್ಕಳು
ಅಂತರ್ಜಲ ಮಾಲಿನ್ಯದ
ಸಾಧ್ಯತೆಗಳು ಕಡಿಮೆ
ಮಣ್ಣಿನ
ಗುಣಮಟ್ಟ ಉತ್ತಮ

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ (RDWSD)**
2ನೇ ಮಹಡಿ, ಇ ಬ್ಲಾಕ್ ಕಟ್ಟಡ, ಕಾವೇರಿ ಭವನ, ಬೆಂಗಳೂರು 560009
ಇ **rdpr.info@gmail.com** ಫೋ **080-22372738**
**www.swachhamevajayate.org**
**www.youtube.com/c/GovtOfKarnatakaRDPR**

**ಪರಿಹಾರ**
**parihara**
ನೀರು ಮತ್ತು ನೈರ್ಮಲ್ಯ

**+91 94809 85555**

GovtOfKarnatakaRdpr
GokRDPR gokRDPR